
# ಅಧ್ಯಾತ್ಮ ಪ್ರಹಸನ



**ಅ**ಧ್ಯಾತ್ಮಕ್ಕೂ ಪ್ರಹಸನಕ್ಕೂ ಏನು ಸಂಬಂಧ ಎಂದು ಕೇಳಬಹುದು. ಅಧ್ಯಾತ್ಮವೆಂದರೆ ಅತಿಗಂಭೀರ ವಿಷಯ, ಪ್ರಹಸನವೆಂದರೆ ತುಂಬ ಹಗುರವಾದ ವಿಷಯ. ಅಧ್ಯಾತ್ಮವನ್ನು ಇಷ್ಟು ಹಗುರವಾಗಿ ಕಾಣುವುದೇ ಎಂದು ಆಕ್ಷೇಪಿಸಬಹುದು. ಅಧ್ಯಾತ್ಮ ನಿಜವಾಗಿಯೂ ತುಂಬ ಹಗುರ ವಾದ ವಿಷಯವೆ. ಅಧ್ಯಾತ್ಮವೆಂದರೆ ಆತ್ಮನಿಗೆ ಸಂಬಂಧಪಟ್ಟುದು. ಆತ್ಮನಿಗೆ ತೂಕವಿರುತ್ತದೆಯೆ? ಯಾವ ಗುಣ ವಿಶೇಷಗಳ ಭಾರವೂ ಇಲ್ಲದ, ಕರ್ಮದ ಹೊರೆಯೂ ಇಲ್ಲದ ಆತ್ಮವು ಪ್ರಪಂಚದಲ್ಲಿ ಅತ್ಯಂತ ಹಗುರವಾದ ವಸ್ತು ಎನ್ನಬಹುದು. ಆತ್ಮಚಿಂತನೆಯಿಂದ ವ್ಯಕ್ತಿಯೂ ಹಗುರವಾಗಿಬಿಡುತ್ತಾನೆ – ಎಲ್ಲ ಕರ್ಮದ ಹೊರೆಯೂ ಕಳೆದುಹೋಗುವುದರಿಂದ. ಹಾಸ್ಯವನ್ನು ಅನುಭವಿಸುವುದಕ್ಕೂ ಮನಸ್ಸು ಹಗುರವಾಗಿರಬೇಕು. ಆದ್ದರಿಂದ ಅಧ್ಯಾತ್ಮವು ವ್ಯಕ್ತಿಯ ಮನಸ್ಸನ್ನು ಹಗುರಗೊಳಿಸಿ ಅವನನ್ನು ಹಾಸ್ಯಪ್ರವೃತ್ತಿಯವನನ್ನಾಗಿ ಮಾಡುತ್ತದೆ.

ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು, ಅವರ ಉಳಿದ ಶಿಷ್ಯರು, ಆ ಶಿಷ್ಯರ ಶಿಷ್ಯರು, ಪ್ರಶಿಷ್ಯರೂ ಎಲ್ಲರೂ ಹಾಸ್ಯಪ್ರವೃತ್ತಿಯವರೇ. ಶ್ರೀರಾಮಕೃಷ್ಣರು ಹೊಟ್ಟೆಹುಣ್ಣಾಗುವಂತೆ ನಗಿಸುತ್ತಿದ್ದರು. ಅವರು ನಗೆಗಾರ ರಾಮಕೃಷ್ಣ ಎಂದೇ ಪ್ರಸಿದ್ಧರಾಗಿದ್ದಾರೆ. ನಾವೆಲ್ಲರೂ ಅವರ ಹಾಸ್ಯ ಪರಂಪರೆಗೇ ಸೇರಿದವರು – ಆದರೆ ಹಾಸ್ಯಕ್ಕೊಳಗಾದವರಲ್ಲ. ಆದರೆ ಅವರ ಆಧ್ಯಾತ್ಮಿಕ ಆದರ್ಶವನ್ನು ಸ್ವೀಕರಿಸದೆ ಅವರ ಹಾಸ್ಯಪ್ರಸಂಗವನ್ನು ಮಾತ್ರ ಅನುಸರಿಸಿದರೆ ನಮ್ಮ ಜೀವನ ಹಾಸ್ಯಾಸ್ಪದವಾಗುವುದರಲ್ಲಿ ಸಂಶಯವಿಲ್ಲ – ಜನರ ದೃಷ್ಟಿಯಿಂದ ಅಲ್ಲದೇ ಇರಬಹುದು, ಶ್ರೀರಾಮಕೃಷ್ಣರ ದೃಷ್ಟಿಯಿಂದಂತೂ ನಿಜ. ತಮ್ಮಲ್ಲಿ ದೊರೆಯುವ ಅತ್ಯಂತ ಪ್ರಶಸ್ತವಾದ ಅಧ್ಯಾತ್ಮವನ್ನು ಬಿಟ್ಟು ಕೇವಲ ಹಾಸ್ಯವನ್ನು ಮಾತ್ರ ಸ್ವೀಕರಿಸುವವರನ್ನು ಕಂಡು 'ನಗೆಯು ಬರುತಿದೆ, ನನಗೆ ನಗೆಯು ಬರುತಿದೆ' ಎಂದು ಅವರು ಹಾಡಬಹುದು. ಈ ರೀತಿ ಅವರ ನಗೆಪಾಟಲಿಗೆ ಒಳಗಾಗದೆ ಅವರನ್ನು ನಾವು ಸಂಪೂರ್ಣ ಅನುಸರಿಸುವಂತಾಗಲಿ.

ಆಧ್ಯಾತ್ಮಿಕ ಜೀವನ ನಡೆಸಬೇಕೆಂದರೆ ನಾವು ಅಂತ ರ್ಮುಖಿಗಳಾಗಬೇಕು. ಸಾಮಾನ್ಯವಾಗಿ ಜನರು ಬಹಿರ್ಮುಖಿ ಗಳಾಗಿರುತ್ತಾರೆ, ಅಷ್ಟೇ ಅಲ್ಲ, ಬಹುಮುಖಿಗಳೂ ಆಗಿರುತ್ತಾರೆ. ಮನೆಯಲ್ಲೇ ಒಂದು ಮುಖ, ಆಫೀಸಿನಲ್ಲಿ ಇನ್ನೊಂದು ಮುಖ, ದೇವಾಲಯಕ್ಕೆ ಹೋದರೆ ಮತ್ತೊಂದು ಮುಖ – ಹೀಗೆ ಅವರು ಬಣ್ಣ ಬದಲಾಯಿಸುತ್ತಲೇ ಹೋಗುತ್ತಾರೆ – ಊಸರವಳ್ಳಿಯಂತೆ. ಊಸರವಳ್ಳಿಗೆ ಕೆಲವೊಮ್ಮೆ ಯಾವ ಬಣ್ಣವೂ ಇರುವುದಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಹಾಗೆಯೇ ಜನರೂ ಕೂಡ ಕೆಲವೊಮ್ಮೆ colourless ಆಗಿಬಿಡುತ್ತಾರೆ. ಅದೇನೇ ಇರಲಿ, ಅಂತರ್ಮುಖದ ವಿಚಾರಕ್ಕೆ ಬರೋಣ. ನಮ್ಮ ಬಹಿರ್ಮುಖ ಗಮನವನ್ನು ನಮ್ಮ ಅಂತರಂಗದ ಕಡೆ ಹರಿಸಬೇಕು, ನಮ್ಮ ಮನಸ್ಸಿನೊಳಗೆ ಏನಾಗುತ್ತಿದೆ ಎಂಬುದನ್ನು ಅರಿಯಲು ಪ್ರಯತ್ನಿಸ ಬೇಕು. ನಾವು ಎಲ್ಲವನ್ನೂ ಅರಿಯಲು ಪ್ರಯತ್ನಿಸಿ ನಮ್ಮನ್ನು ನಾವು ಮರೆತುಬಿಡುತ್ತೇವೆ. ಎಲ್ಲರ ದೋಷವನ್ನು ಅರಿಯುತ್ತೇವೆ, ಆದರೆ ನಮ್ಮಲ್ಲಿರುವ ಒಳ್ಳೆಯದನ್ನೂ ನಾವು ಗಮನಿಸುವುದಿಲ್ಲ.

ಹತ್ತು ಜನ ಸ್ನೇಹಿತರು ಎಲ್ಲಿಗೊ ಪ್ರಯಾಣಕ್ಕೆ ಹೊರಟಿದ್ದರು. ಮಧ್ಯದಲ್ಲಿ ಒಂದು ನದಿ ಸಿಕ್ಕುತ್ತದೆ. ಅದು ಪ್ರವಾಹದಿಂದ ತುಂಬಿ ಹರಿಯುತ್ತಿತ್ತು. ಹತ್ತು ಜನರೂ ತುಂಬ ಕಷ್ಟದಿಂದ ಈಜಿಕೊಂಡು ನದಿಯ ಆಚೆ ದಡ ಸೇರಿದರು. ಎಲ್ಲರೂ ಬಂದಿದ್ದಾರೊ ಅಥವಾ ಯಾರಾದರೊಬ್ಬರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೊ ಎಂಬುದನ್ನು ನೋಡಲು ಒಬ್ಬನು ಎಲ್ಲರನ್ನೂ ಎಣಿಸಲು ಪ್ರಾರಂಭಿಸಿದ. ಒಂಬತ್ತು ಜನ ಮಾತ್ರ ಇದ್ದರು. ಒಬ್ಬೊಬ್ಬರಾಗಿಯೇ ಎಲ್ಲರೂ ಎಣಿಸಿ ನೋಡಿದರು. ಒಬ್ಬನು ನಾಪತ್ತೆ. ಕಳೆದುಹೋದವನಿಗಾಗಿ ಅವರೆಲ್ಲ ರೋದಿಸುತ್ತಿರುವಾಗ ದಾರಿಹೋಕನೊಬ್ಬನು ಅಲ್ಲಿಗೆ ಬರುತ್ತಾನೆ. ಅವನು ಸಂಗತಿಯನ್ನು ತಿಳಿದುಕೊಂಡು, ಅವರನ್ನೆಲ್ಲ ಸಾಲಾಗಿ ನಿಲ್ಲಿಸಿ, ಈಗ ಒಂದು ಕಡೆಯಿಂದ ಒಂದು, ಎರಡು, ಮೂರು ಎಣಿಸಲು ಹೇಳಿದನು. ಆಗ ಸಂಖ್ಯೆ ಹತ್ತರವರೆಗೂ ಏರಿತು, ಒಂಬತ್ತಕ್ಕೆ ನಿಲ್ಲಲಿಲ್ಲ. ಕೂಡಲೆ ಅವರಿಗೆಲ್ಲ ಹೊಳೆಯಿತು ಎಣಿಸಿದವನೇ ಹತ್ತನೆಯವನು. ಎಣಿಸುವವನು ತನ್ನನ್ನು ಬಿಟ್ಟು ಬೇರೆಯವರನ್ನೆಲ್ಲ ಎಣಿಸಿದ್ದನು. ಹಾಗೆಯೇ ಪ್ರಪಂಚ ವ್ಯವಹಾರದಲ್ಲಿ ಎಲ್ಲವನ್ನೂ ಎಣಿಸಿ ನಮ್ಮನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ಅಂದರೆ ನಮ್ಮ ಕಡೆಗೆ ಗಮನವೇ ಇರುವುದಿಲ್ಲ, ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಕಡೆಗಣಿಸುತ್ತೇವೆ. ಎಲೆ ಎಣಿಸುವ ಭರದಲ್ಲಿ ಹಣ್ಣು ತಿನ್ನುವುದನ್ನು ಮರೆಯುತ್ತೇವೆ.

(ಬರಹ: ಸ್ವಾಮಿ ನಿತ್ಯಸ್ಥಾನಂದ)